# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ ಸೋಜಾ ಇವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಉತ್ತರ.

**ವಿಷಯ:-**

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ದೇವಿಹಳ್ಳಿ ಗ್ರಾಮದ 85 ವರ್ಷದ ಅತ್ಯಂತ ಹಿರಿಯ ನಾಗರೀಕ ಹಾಗೂ ಅನಕ್ಷರಸ್ಥ ವೃದ್ಧೆಯವರು ದೇವಿಹಳ್ಳಿ ಸರ್ವೆ ನಂ. 30/6ರಲ್ಲಿ ತನ್ನ ಪಿತ್ರಾರ್ಜಿತ ಗುಂಟೆ ಜೊತೆ 12, ½ ಗುಂಟೆ ಕೃಷಿ ಜಮೀನನ್ನು 1967ರಲ್ಲೂ ಇವರ ದಿವಂಗತ ತಂದೆ ಗೋಣಿ ತುಮಕೂರು ಸರ್ವೆ ನಂ. 245/2ರಲ್ಲಿ 1944ರಲ್ಲಿ 14 ಗುಂಟೆಯನ್ನು ಇವರ ದಿವಂಗತ ಪತಿ ಸೂಳೇಕೆರೆ ಸರ್ವೆ ನಂ. 77/3ರಲ್ಲಿ ¾ ಗುಂಟೆ ಕೃಷಿ ಜಮೀನನ್ನು 1963ರಂದು ಕ್ರಯಕ್ಕೆ ಪಡೆದ ದಿನದಿಂದ ಇಲ್ಲಿಯವರೆಗೆ ಯಾವುದೇ ತೊಂದರೆಯಿಲ್ಲದೆ ಸ್ವಾಧೀನದಲ್ಲಿದ್ದೂ ತೆಂಗು ಹಾಗೂ ಅಡಿಕೆ ಕೃಷಿ ಮಾಡುತ್ತಿದ್ದಾರೆ. ಅವರುಗಳ ಹೆಸರುಗಳಿಗೆ ಈ ಹಿಂದೆ ನೀಡಿರುವ ಪಟ್ಟಿ ಬುಕ್, ಆಕಾರ್ ಬಂದ್, ಮ್ಯುಟೇಷನ್ ನಂತೆ ರೆವೆನ್ಯು ರೆಕಡಾರ್ ಹಿಸ್ಸಾದಲ್ಲಿ ಇವರ ಹೆಸರು ದಾಖಲಾಗಿ ರೀ ಸರ್ವೆ ನಂ. 30/6ಎ ಹಾಗೂ 245/2ಬಿ ಎಂದೂ ಪೋಡ್ ಸಹ ಆಗಿ ಅದರಲ್ಲಿ ಮೇಲ್ಕಂಡ ಶ್ರೀಮತಿ ಜವರಮ್ಮ ಹಾಗೂ ಇವರ ದಿವಂಗತ ತಂದೆ ತಿಮ್ಮೇಗೌಡರ ಹೆಸರು ದಾಖಲಾಗಿದೆ. ಆದಾಗ್ಯೂ, ಎಂಆರ್ ಹಾಗೂ ಹಿಂದಿನ ಕೈಬರವಣಿಗೆ ದಾಖಲೆ ನೀಡಿಲ್ಲವೆಂದು ಕೆಳಹಂತದ ಅಧಿಕಾರಿಗಳು ಇವರ ಹೆಸರನ್ನು ಆರ್‌ಟಿಸಿಯಲ್ಲಿ ದಾಖಲಿಸದೇ ತೊಂದರೆಯಾಗಿರುತ್ತದೆ.

ಆಶ್ಚರ್ಯವೆಂದರೆ, ಮೇಲ್ಕಂಡ ನೋಂದಣಿ ವರ್ಷವೂ ಸೇರಿ ಇನ್ನೂ ಅನೇಕ ವರ್ಷಗಳ ಮ್ಯುಟೇಷನ್ ಹಾಗೂ ಹಿಂದಿನ ಖಾತಾ ದಾಖಲೆಗಳು ನಾಡ ಕಛೇರಿ/ತಾಲ್ಲೂಕು ಕಛೇರಿಗಳಲ್ಲಿ ಕಳೆದು ಹೋಗಿ ಲಭ್ಯವಿಲ್ಲದಿರುವುದು ದೃಢಪಟ್ಟಿರುತ್ತದೆ. ಸರ್ಕಾರದ ಬಳಿಯೇ ಇಲ್ಲದ ದಾಖಲೆಗಳನ್ನು ಕ್ರಯದಾರರು ಒದಗಿಸಲು ಹೇಗೆ ಸಾಧ್ಯ ಆದುದರಿಂದ ಸರ್ಕಾರದ ಕಾಯದರ್ಶಿಗಳು ತಾಲ್ಲೂಕು ಕಛೇರಿಯಿಂದ ಮೂಲ ದಾಖಲೆಗಳು ಸ್ಥಳ ಪರಿಶೀಲನಾ ವರದಿ ತಯಾರಿಸಿ, ಹಾಲಿ ಇರುವ ಕ್ರಯಪತ್ರ ಇತ್ಯಾದಿ ದಾಖಲೆಗಳ ಆಧಾರದ ಮೇಲೆ 85 ವರ್ಷದ ಏಕೈಕ ವಾರಸುದಾರರಾದ ಶ್ರೀ ಜವರಮ್ಮ ಹೆಸರನ್ನು ಆರ್‌ಟಿಸಿಯಲ್ಲಿ ದಾಖಲಿಸುವಂತೆ ತಹಶೀಲ್ದಾರ್‌ರವರಿಗೆ ಸರ್ಕಾರದ ವತಿಯಿಂದ ಸೂಕ್ತ ನಿರ್ದೇಶನ ನೀಡಿ ನ್ಯಾಯಾ ಒದಗಿಸಲು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ತುರುವೇಕೆರೆ ತಾಲ್ಲೂಕು, ದಬ್ಬೇಘಟ್ಟ ಹೋಬಳಿ, ದೇವಿಹಳ್ಳಿ ಗ್ರಾಮದ ಸ.ನಂ. 30/6 ರಲ್ಲಿ 1-10 ಎ/ಗು ಜಮೀನು ಪೈಕಿ 0-07 ಗುಂಟೆ ರಿ.ನಂ. 4743/67-68 ದಿನಾಂಕ: 13-03-1967 ರಂದು ತಿಮ್ಮಶೆಟ್ಟಯ್ಯ ಬಿನ್ ಮೂಡಲಗಿರಿಗೌಡ ರವರಿಂದ ಜವರಮ್ಮ D/O ತಿಮ್ಮೇಗೌಡ ರವರಿಗೆ ಕ್ರಯವಾಗಿರುತ್ತದೆ. ಕ್ರಯಪತ್ರದಂತೆ ಎಂಆರ್ ಆಗಿರುವ ಬಗ್ಗೆ ದಾಖಲೆ ಇರುವುದಿಲ್ಲ. ರಿ.ನಂ. 1131/67-68 ದಿನಾಂಕ: 31-08-1967 ರಂತೆ 0-05.1/2 ಗುಂಟೆ ಜಮೀನಿಗೆ ಸಂಬಂಧಪಟ್ಟ ದಾಖಲಾತಿ ನೀಡಿರುವುದಿಲ್ಲ. ಉಪ ತಹಶೀಲ್ದಾರ್, ನಾಡಕಛೇರಿ, ದಬ್ಬೇಘಟ್ಟ ಇವರು ದಿನಾಂಕ: 02-10-2024 ರಂದು ರಿ.ನಂ. 4743/67-68 ದಿನಾಂಕ: 13-03-1967 ರ ಕ್ರಯಪತ್ರದಂತೆ ಎಂಆರ್ ಆಗಿರುವ ಎಂಆರ್ ಲಭ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಹಾಲಿ ಪಹಣಿ ಪರಿಶೀಲಿಸಲಾಗಿ, ಸ.ನಂ. 30/6 ರಲ್ಲಿ 1-10 ಎ/ಗು ಜಮೀನು ಕಾಲಂ 9 ರಲ್ಲಿ ರಂಗಪ್ಪ ಬಿನ್ ಬೆಟ್ಟೇಗೌಡ 0-11.1/2, ಎಂಆರ್: 15/98-99 ಗಂಗಯ್ಯ ಬಿನ್ ತಿಮ್ಮಯ್ಯ 0-12 ಗುಂಟೆ ಎಂಆರ್: 7/96-97 ಕ್ರಯ, ಜವರಮ್ಮ ಕೋಂ ಲಿಂಗೇಗೌಡ 0-08 ಗುಂಟೆ, ಎಂಆರ್: 7/96-97 ಪೌತಿ, ಶಂಭಮ್ಮ, ರಂಗಮ್ಮ, ಕೆಂಪಯ್ಯ, ಜವರಯ್ಯ ಜಂಟಿ 0-08.1/2 ಗುಂಟೆ, ಶಂಭಮ್ಮ, ರಂಗಮ್ಮ, ಕೆಂಪಯ್ಯ, ಕೋಣಪ್ಪ 0-10 ಗುಂಟೆ ಎಂಆರ್: 74/21-22 ಖಾತೆದಾರರಿರುತ್ತಾರೆ.

ಗೋಣಿತುಮಕೂರು ಗ್ರಾಮದ ಸ.ನಂ. 245/2 ರಲ್ಲಿ 0-14 ಗುಂಟೆ ರಿ.ನಂ. 3192/43-44 ದಿನಾಂಕ: 26-06-1944 ರಂದು ತಿಮ್ಮೇಗೌಡ ಬಿನ್ ಮೂಡ್ಲಿ ನಿಂಗೇಗೌಡ ರವರಿಗೆ ಸಣ್ಣಲಿಂಗೇಗೌಡರ ಮಗ ಭೈರೇಗೌಡ ಮೈನರ್ ಗಾರ್ಡಿಯನ್ ಖಾಸ ತಾಯಿ ಗಾರ್ಡಿಯನ್ ಹುಚ್ಚಮ್ಮ ರವರಿಂದ ಕ್ರಯವಾಗಿರುತ್ತದೆ. ಕ್ರಯಪತ್ರದಂತೆ ಎಂಆರ್ ಆಗಿರುವ ಬಗ್ಗೆ ದಾಖಲೆ ಇರುವುದಿಲ್ಲ. ಉಪತಹಶೀಲ್ದಾರ್, ನಾಡಕಛೇರಿ ದಬ್ಬೇಘಟ್ಟ ಇವರು ದಿನಾಂಕ: 02-10-2024 ರಂದು ರಿ.ನಂ. 3192/43-

44 ದಿನಾಂಕ: 26-06-1944 ರ ಕ್ರಯಪತ್ರದಂತೆ ಎಂಆರ್ ಆಗಿರುವ ಎಂಆರ್ ಲಭ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಹಾಲಿ ಪಹಣಿ ಪರಿಶೀಲಿಸಲಾಗಿ, ಸ.ನಂ. 245/2 ಪೋಡಿ ದುರಸ್ತಾಗಿ ಸ.ನಂ. 245/2ಎ ರಲ್ಲಿ 0-10 ಗುಂಟೆ, 0-01 ಗುಂಟೆ ಖರಾಬು, 0-09 ಗುಂಟೆ ತಿಮ್ಮೇಗೌಡ ಬಿನ್ ನಿಂಗೇಗೌಡ, ಸ.ನಂ. 245/2ಬಿ ರಲ್ಲಿ 0-09 ಗುಂಟೆ ಕಪನೀಗೌಡ ಬಿನ್ ಹುಚ್ಚೇಗೌಡ ಆರ್‌ಆರ್ ಪಕ್ಕಾದಂತೆ ದಾಖಲು ಇದ್ದು, ಸ.ನಂ. 245/2ಎ ಎಂಆರ್‌ಹೆಚ್: 10/2013-14 ರಂತೆ ಜಿ.ಬಿ.ರಂಗಸ್ವಾಮಿ ಬಿನ್ ಲೇ|| ಜೆ ಎಸ್ ಬೋರೇಗೌಡ ಖಾತೆ ದಾಖಲು ಇರುತ್ತದೆ.

ತುರುವೇಕೆರೆ ತಾಲ್ಲೂಕು, ದಬ್ಬೇಘಟ್ಟ ಹೋಬಳಿ, ದೇವಿಹಳ್ಳಿ ಗ್ರಾಮದ ಸ.ನಂ. 30/6 ರಲ್ಲಿ 1-10 ಎ/ಗು ಜಮೀನು ಪೈಕಿ 0-07 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹಾಗೂ ಗೋಣಿತುಮಕೂರು ಗ್ರಾಮದ ಸ.ನಂ. 245/2 ರಲ್ಲಿ 0-14 ಗುಂಟೆ ಜಮೀನುಗಳಿಗೆ ಸಂಬಂಧಿಸಿದಂತೆ ಕ್ರಯದಾರರಾದ ಶ್ರೀಮತಿ ಜವರಮ್ಮ D/O ತಿಮ್ಮೇಗೌಡ ರವರು ಕ್ರಯಪತ್ರದಂತೆ ಖಾತೆ ಬದಲಾವಣೆಗಾಗಿ ತಹಶೀಲ್ದಾರ್ ಕಛೇರಿಗೆ ದಿ: 14-06-2022 ರಂದು ಅರ್ಜಿ ಸಲ್ಲಿಸಿದ್ದು. ಆರ್‌ಆರ್‌ಟಿಸಿಆರ್: 158/22-23 ದಿನಾಂಕ: 06-01-2023 ರಂದು ತಹಶೀಲ್ದಾರ್ ಕಛೇರಿಯಿಂದ ಕ್ರಯಕ್ಕೆ ಕೊಟ್ಟವರ ಹೆಸರಿಗೆ ಆರ್‌ಟಿಸಿ ಇರುವುದಿಲ್ಲ. ಪ್ರಯುಕ್ತ ಸದರಿ ಎಂಆರ್‌ಗಳ ಮೇಲೆ ಮೇಲ್ಮನವಿ ಸಲ್ಲಿಸಿಕೊಳ್ಳಬೇಕೆಂದು ಹಿಂಬರಹ ನೀಡಿರುತ್ತಾರೆ.

ಪ್ರಶ್ನಿತ ಎರಡೂ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ್, ತುರುವೇಕೆರೆ ಇವರ ಆರ್‌ಆರ್‌ಟಿಸಿಆರ್: 158/22-23, ದಿನಾಂಕ: 06-01-2023ರ ಹಿಂಬರಹದ ವಿರುದ್ಧ ಉಪವಿಭಾಗಾಧಿಕಾರಿ, ತಿಪಟೂರು ಉಪವಿಭಾಗ, ತಿಪಟೂರು ರವರಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 136(2) ರಡಿ ದಿನಾಂಕ: 23-02-2023 ರಂದು ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿದಾರರು ಸಲ್ಲಿಸಿರುವ ಪ್ರಕರಣವನ್ನು ದಾಖಲಿಸಿಕೊಂಡು ಪಕ್ಷಗಾರರಿಗೆ ನೋಟೀಸು ನೀಡಲಾಗಿದೆ ಹಾಗೂ ಪ್ರಕರಣದಲ್ಲಿ ನಿಲುವುಗಳನ್ನು ಮಂಡಿಸಲು ಸಾಕಷ್ಟು ಮತ್ತು ಸಮನಾಂಶ ಕಾಲಾವಕಾಶವನ್ನು ನೀಡಿ ವಿಚಾರಣಾ ಕ್ರಮ ಜರುಗಿಸಲಾಗಿದೆ. ಕ್ರಯಪತ್ರಗಳಂತೆ ಎಂಆರ್ ಅಂಗೀಕರವಾಗಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಮತ್ತು ಮೇಲ್ಮನವಿದಾರರು ಕ್ರಯಪತ್ರದ ಆಧಾರದ ಮೇಲೆ ಸುಮಾರು 55 ವರ್ಷಗಳ ನಂತರ ಹಕ್ಕು ದಾಖಲೆ ನಮೂದಿಸಲು ಕೋರಿದ್ದು, ಇಷ್ಟು ದೀರ್ಘ ವಿಳಂಬಕ್ಕೆ ಸೂಕ್ತ ಕಾರಣಗಳನ್ನು ನೀಡಿರುವುದಿಲ್ಲ, ಆದ್ದರಿಂದ ಮೇಲ್ಮನವಿದಾರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಮೇಲ್ಮನವಿಯನ್ನು ವಜಾ ಮಾಡುವುದು ಸೂಕ್ತವೆಂದು ಮೇಲ್ಮನವಿಯನ್ನು ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ, ತಿಪಟೂರು ರವರು ದಿನಾಂಕ: 06-03-2024 ರಂದು ಮೇಲ್ಮನವಿಯನ್ನು ವಜಾ ಮಾಡಿ ಆದೇಶ ಮಾಡಿರುತ್ತಾರೆ.

ಪ್ರಯುಕ್ತ ಪ್ರಶ್ನಿತ ಜಮೀನುಗಳ ಸಂಬಂಧ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿಕೊಂಡು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ತಿಳಿಸಲಾಗಿರುತ್ತದೆ.

ಕಸಬಾ ಹೋಬಳಿ, ಸೂಳೆಕೆರೆ ಗ್ರಾಮದ ಸ.ನಂ. 77/3 ರಲ್ಲಿ 0-04 ಗುಂಟೆ, ತಿಮ್ಮೇಗೌಡ ಬಿನ್ ಮೂಡಲಗಿರಿಗೌಡ ರವರಿಂದ ಲಿಂಗಪ್ಪ @ ಲಿಂಗೇಗೌಡ ಬಿನ್ ಚಿಕ್ಕೇಗೌಡ ರವರಿಗೆ ರಿ.ನಂ. 1499/63-64 ದಿನಾಂಕ: 30-08-1963 ರಂದು ಕ್ರಯವಾಗಿದ್ದು, ಹಾಲಿ ಪಹಣಿಯಲ್ಲಿ ಮೂಡ್ಲಗಿರಯ್ಯ ಬಿನ್ ತಿಮ್ಮಶೆಟ್ಟಿ ರವರ ಹೆಸರಿಗೆ ಆರ್ ಆರ್ 170 ರಂತೆ 0-04 ಗುಂಟೆ ನಮೂದಾಗಿದ್ದು, ಕ್ರಯಕ್ಕೆ ನೀಡಿರುವ ಹಾಲಿ ಪಹಣಿಯಲ್ಲಿರುವ ಖಾತೆದಾರರಿಗೆ ಹೆಸರು ತಾಳೆ ಇರುವುದಿಲ್ಲ.

ಸದರಿ ಸ.ನಂ ಗಳ ಸಂಬಂಧ ಈಗಾಗಲೇ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ತಿಪಟೂರು ಉಪವಿಭಾಗದಲ್ಲಿ ಆರ್‌ಎ(ತು)ಸಿ.ಆರ್: 170/2024-25 ರಂತೆ ಪ್ರಕರಣ ನಡೆದು ಮೇಲ್ಮನವಿದಾರರು ಕ್ರಯ ಪತ್ರದ ಆಧಾರದ ಮೇಲೆ ಸುಮಾರು 55 ವರ್ಷಗಳ ನಂತರ ಹಕ್ಕುದಾಖಲೆ ನಮೂದಿಸಲು ಕೋರಿದ್ದು, ಇಷ್ಟು ದೀರ್ಘ ವಿಳಂಬಕ್ಕೆ ಸೂಕ್ತ ಕಾರಣಗಳನ್ನು ನೀಡಿರುವುದಿಲ್ಲವೆಂದು ಮೇಲ್ಮನವಿದಾರರು ಸಕ್ಷಮ ಸಿವಿಲ್ ನ್ಯಾಯಾಲಯಲ್ಲಿ ಪ್ರಕರಣ ದಾಖಲಿಸಿಕೊಂಡು ಪರಿಹಾರ ಕಂಡುಕೊಳ್ಳಬಹುದಾಗಿರುತ್ತದೆ ಎಂದು ಪ್ರಕಣವನ್ನು ವಜಾ ಮಾಡಿ ಆದೇಶಿಸಲಾಗಿರುತ್ತದೆ. ಆದ್ದರಿಂದ

ಅರ್ಜಿದಾರರಿಗೆ ಸದರಿ ಆದೇಶದ ಮೇಲೆ ಆಕ್ಷೇಪಣೆ ಇದ್ದಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿಕೊಂಡು ಪರಿಹಾರ ಕಂಡುಕೊಳ್ಳಬಹುದಾಗಿರುತ್ತದೆ.

**ಸಂಖ್ಯೆ: ಕಂಇ 257 ಟಿಆರ್‌ಎಂ 2024**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು